**50ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು**

ಸಿ ಸಿ ನಂ. 4317/2019

ಪಿ.ಡಬ್ಲೂ –4 ಸಿ.ಡಬ್ಲೂ– 11

ಸಾಕ್ಷಿದಾರರ ಹೆಸರು : ತಿಪ್ಪೇಸ್ವಾಮಿ

ತಂದೆಯ ಹೆಸರು : ಮಲ್ಲಪ್ಪ

ವಯಸ್ಸು : 44 ವರ್ಷ

ಕೆಲಸ : ಪಿ ಐ

ವಾಸ : ಆನೇಕಲ್ ಪೊ.ಠಾ.

**ಸಾಕ್ಷಿಯನ್ನು ದಿನಾಂಕಃ– 22–06–2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ**

ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ 2018 ರಿಂದ 2019 ವರೆಗೂ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ಈ ಪ್ರಕರಣದಲ್ಲಿ ನಾನು ದಿಃ 24.11.2018 ರಂದು ಈ ಪ್ರಕರಣದ ಕಡತವನ್ನು ಚಾಸಾ-10 ರವರಿಂದ ಪಡೆದುಕೊಂಡು ಪರಿಶೀಲಿಸಿ ನಂತರ ಚಾಸಾ-8, 9 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಆರೋಪಿ ಗಂಗಣ್ಣ ರವರ ಮೊಕದ್ದಮ್ಮೆ ಸಂ.3/2018 ರಲ್ಲಿ ಹಾಜರು ಪಡಿಸಿದ ಮೇರೆಗೆ ಆತನ ಸ್ವಇಚ್ಚಾ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ 2 ನೇ ಆರೋಪಿ ಸ್ವಇಚ್ಚಾ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 25.11.2018 ರಂದು ಮೊಕದ್ದಮ್ಮೆ ಸಂ.373/2018 ರಲ್ಲಿ ಚಾಸಾ-4 ರವರು ಬಂಗಾರ ಮತ್ತು ಬೆಳ್ಳಿ ಸಾಮಾನುಗಳನ್ನು ಠಾಣೆಗೆ ತಂದು ಹಾಜರು ಪಡಿಸಿದ ಮೇರೆಗೆ ಚಾಸಾ-5, 6 ರವರ ಸಮಕ್ಷಮ ಸಂಜೆ 6-30 ರಿಂದ 7-30 ರವರೆಗೆ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಮಾಲುಗಳನ್ನು

ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ-4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ, ಅದೇ ದಿನ ಆರೋಪಿಗಳು ಕೃತ್ಯಕ್ಕೆ ಬಳಸಿದ ಒಂದು ಕಬ್ಬಿಣದ ರಾಡು, 1 ವರೆ ಅಡಿ ಉದ್ದದ ಮುಂದೆ ಚಪ್ಪಟೆಯಾಗಿರುವ ಕಬ್ಬಿಣದ ರಾಡು, ಇವುಗಳನ್ನು ಪಂಚರಾದ ಚಾಸಾ-5, 6 ರವರ ಸಮಕ್ಷಮ ಮಧ್ಯಾಹ್ನ 10-30 ರಿಂದ 11-30 ರವರೆಗೆ ಪಂಚನಾಮೆ ಜರುಗಿಸಿ ಮಾಲು ಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ-5, 6 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ 1, 2 ನೇ ಆರೋಪಿಗಳ ಮುಂದುವರೆದ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-8, 9 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 28.11.2018 ರಂದು 3 ನೇ ಆರೋಪಿ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 29.11.2018 ರಂದು ಚಾಸಾ-1 ರವರ ಮಾಲು ಮತ್ತು ಆರೋಪಿ ಗುರುತಿಸಿದ ಬಗ್ಗೆ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 30.11.2018 ರಂದು ಮುಚ್ಚಳಿಗೆ ಪತ್ರ ಬರೆಸಿಕೊಂಡು ಚಾಸಾ-1 ರವರಿಗೆ ಮಾಲನ್ನು ಹಿಂತಿರುಗಿಸಿರುತ್ತೇನೆ. ನಂತರ ದಿಃ 08.12.2018 ರಲ್ಲಿ ಪ್ರಕರಣದಲ್ಲಿ ತನಿಖೆ ಮುಕ್ತಾಯವಾಗಿದ್ದರಿಂದ ಆರೋಪಿಗಳ ವಿರುದ್ದ ದೋಷರೋಪಣ ಪತ್ರ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರು ಪಡಿಸಿರುವ 1 ಮತ್ತು 3 ನೇ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

ಸಾಕ್ಷಿ ನಿಪಿ.1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1ಎ ಎಂದು , ಮಾಲು ಪಟ್ಟಿಯನ್ನು ನಿಪಿ.6ಎಂದು , ಚಾಸಾ–7 ಅವರ ಹೇಳಿಕೆಯನ್ನು ನಿಪಿ.7 ಎಂದು, ಚಾಸಾ–1 ಅವರು ಮಾಲು ಮತ್ತು ಆರೋಪಿ ಗುರುತಿಸಿದ ಬಗ್ಗೆ ಹೇಳಿಕೆಯನ್ನು ನಿಪಿ.8ಎಂದು, ಮುಚ್ಚಳಿಕೆ ಪತ್ರವನ್ನು ನಿಪಿ.9ಎಂದು, ಸಾಕ್ಷಿಯ ಸಹಿಯನ್ನು ನಿಪಿ.9ಎ ಎಂದು, ಎರಡು ಛಾಯಾಚಿತ್ರಗಳನ್ನು ನಿಪಿ.10 ಮತ್ತು

ನಿಪಿ.11 ಎಂದು, ಚಾಸಾ–9ಅವರ ಹೇಳಿಕೆ ಮತ್ತು ಮುಂದುವರೆದ ಹೇಳಿಕೆಗಳನ್ನು ನಿಪಿ.12 ಮತ್ತು ನಿಪಿ.13ಎಂದು, 1ನೇ ಆರೋಪಿ ಹೇಳಿಕೆ ಮತ್ತು ಮುಂದುವರೆದ ಹೇಳಿಕೆಯನ್ನು ನಿಪಿ.14 ಮತ್ತು ನಿಪಿ.15ಎಂದು , 2ನೇ ಆರೋಪಿಯ ಹೇಳಿಕೆ ಮತ್ತು ಮುಂದುವರೆದ ಹೇಳಿಕೆಯನ್ನು ನಿಪಿ.16 ಮತ್ತು ನಿಪಿ.17ಎಂದು , 4ನೇ ಆರೋಪಿಯ ಹೇಳಿಕೆ ಮತ್ತು ಮುಂದುವರೆದ ಹೇಳಿಕೆಯನ್ನು ನಿಪಿ.18 ಮತ್ತು ನಿಪಿ.19ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ವಿಸಿ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಕಬ್ಬಿಣದ ರಾಡುಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಮೊದಕ್ಕಮ್ಮೆ ಸಂ.500/2018 ರಲ್ಲಿ ಪ್ರತ್ಯೇಕ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಸ್ವಇಚ್ಛಾ ಹೇಳಿಕೆಗಳನ್ನು ಅವರ ಕೈಬರಹದಲ್ಲಿ ಬರೆಸಿಕೊಂಡಿಲ್ಲ. ಆರೋಪಿಗಳ ಸ್ವಇಚ್ಛಾ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನಾವುಗಳೇ ಬೆರಳಚ್ಚು ಮಾಡಿಸಿ ಒತ್ತಾಯದಿಂದ ಠಾಣೆಯಲ್ಲಿ ಅವರ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ–1 ರವರ ಹೆಸರು ನನಗೆ ನೆನಪಿಲ್ಲ. ಚಾಸಾ–9, 10 ರವರಿಗೆ ಈ ಪ್ರಕರಣದಲ್ಲಿ ದಸ್ತಗಿರಿ ಮಾಡಿಕೊಂಡು ಬನ್ನಿ ಎಂದು ಯಾವುದೇ ಆದೇಶ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಅಮಾನತ್ತು ಪಂಚನಾಮೆ ಮಾಡದೇ ಇದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದಲ್ಲಿ ಬೆರಳಚ್ಚು ಮುದ್ರೆಯನ್ನು ತೆಗೆದುಕೊಂಡಿಲ್ಲ. ರಾಡುಗಳನ್ನು ಈ ಕೇಸಿನಲ್ಲಿ ಹಾಜರು ಮಾಡಿಲ್ಲ ಎಂದರೆ ಸರಿ. ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದೋಷರೋಪಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಯಿತು.)

**ಓ ಹೇ ಕೇ ಸ ಇ ಒ**

**50ನೇ ಅ. ಮು. ಮ. ದಂ. ನ್ಯಾ**